> **ಧರ್ಮಸಮ್ಮೇಳನದಲ್ಲಿ ವಿವೇಕಾನಂದರಷ್ಟು ಇತರರ ಗಮನವನ್ನು ಸೆಳೆದವರು ಮತ್ತು ಆಸಕ್ತಿಯನ್ನು ಕೆರಳಿಸಿದವರು ಯಾರೂ ಇರಲಿಲ್ಲ.**
>
> —*Rays of Light from All Lands, Ed., by E.C. Towne.*

ಯವರ ತ್ಯಾಗಮಯ ಜೀವನವು ದೇಶದ ತರುಣರಿಗೆ ಸ್ಫೂರ್ತಿಯನ್ನುಂಟುಮಾಡಲಿದೆ" ಎಂದು ಹೇಳಿ ಸ್ವಾಮೀಜಿಯವರ ವಿಚಾರಗಳು ಮುಂದಿನ ತರುಣ ಪೀಳಿಗೆಗೆ ಚಿರಂತನ ದಾರಿದೀವಿಗೆಯಾಗಲಿದೆ ಎಂಬ ಅಂಶವನ್ನು ಆಗಲೇ ಮನಗಂಡಿದ್ದರು.

ಸ್ವತಂತ್ರ ಭಾರತದ ಕಟ್ಟಕಡೆಯ ಗೌರ್ನರ್ ಜನರಲ್ ಆಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿಯವರು ಸಮಸ್ತ ಭಾರತೀಯರ ಭಾವಪೂರ್ಣ ಕೃತಜ್ಞತೆಗಳನ್ನು ಸ್ಮರಣೀಯವಾದ ಈ ಮಾತುಗಳಲ್ಲಿ ಧ್ವನಿಸಿದ್ದಾರೆ: "ಸ್ವಾಮೀಜಿ ಹಿಂದೂ ಧರ್ಮವನ್ನೂ ಭಾರತವನ್ನೂ ರಕ್ಷಿಸಿದರು. ಇವರಿಲ್ಲದಿದ್ದಿದ್ದರೆ ನಮ್ಮ ಧರ್ಮವೂ ಉಳಿಯುತ್ತಿರಲಿಲ್ಲ; ನಾವು ಸ್ವಾತಂತ್ರ್ಯವನ್ನೂ ಗಳಿಸುತ್ತಿರಲಿಲ್ಲ. ಈ ರಾಷ್ಟ್ರ ಅವರಿಗೆ ಚಿರಋಣಿಯಾಗಿರಬೇಕು."

ಸ್ವಾಮೀಜಿಯವರ ಅಮೆರಿಕ ಮತ್ತು ಯೂರೋಪ್‌ಗಳಲ್ಲಿನ ಪ್ರಚಂಡ ಯಶಸ್ಸು ಗುರುದೇವ ಶ್ರೀರಾಮಕೃಷ್ಣರ ಸಂಕಲ್ಪ ಮತ್ತು ಶ್ರೀಮಾತೆಯವರ ಕೃಪಾಶೀರ್ವಾದಗಳ ಫಲ. ಅಷ್ಟೇ ಅಲ್ಲ, ಸ್ವಯಂ ಸ್ವಾಮೀಜಿಯವರ ಅಂತರ್ದೃಷ್ಟಿಗೆ ಈ ದಿಗ್ವಿಜಯವು ಮೊದಲೇ ಸ್ಪಷ್ಟವಾಗಿ ಗೋಚರವಾಗಿತ್ತು. ಅಮೆರಿಕಾದಲ್ಲಿ ವಿಶ್ವಧರ್ಮ ಸಮ್ಮೇಳನ ನಡೆಯಲಿದೆ ಎಂಬ ವಿಷಯ ತಿಳಿದ ಕೂಡಲೇ ಅವರು "ಈ ಧರ್ಮಸಮ್ಮೇಳನ ನಡೆಯಲಿರುವುದು ನನಗಾಗಿಯೇ" ಎಂದು ಸ್ವಾಮಿ ತುರೀಯನಂದಜಿಯವರಿಗೆ ಹೇಳಿದ್ದರು.

ಶ್ರೀರಾಮಕೃಷ್ಣರು ತಮ್ಮ ಅತೀಂದ್ರಿಯ ದೃಷ್ಟಿಯಿಂದ ಕಂಡು ಉದ್ಗರಿಸಿದ "ಅಲ್ಲಿಗೆ ಅಷ್ಟೊಂದು ಜನ ಬರುತ್ತಾರೆ. ಅವನಂತಹವರು ಬೇರೆ ಯಾರೂ ಇಲ್ಲ" ಎಂಬ ದೈವೀ ಕನಸು ಅದೆಷ್ಟು ಪರಿಪೂರ್ಣ ನನಸಾಗಿ, ಭಾರತವನ್ನು ತನ್ಮೂಲಕ ಜಗತ್ತನ್ನು ಬೆಳಗಿಸಿತು ಎಂಬುದು ಈಗ ಲೋಕವಿಖ್ಯಾತವಾಗಿದೆ, ಇತಿಹಾಸದ ಭಾಗವಾಗಿದೆ. ◆

# ಭಾರತೀಯ ಹಬ್ಬ

ಡಾ.ಕೆ.ಎಲ್. ಪ್ರಸನ್ನಾಕ್ಷಿ

**ಹಬ್ಬಗಳ ಆಚರಣೆ ಮನರಂಜನೆ ಮತ್ತು ಆಡಂಬರಗಳಿಗೆ ಒಂದು ಸಂದರ್ಭವಾಗದೆ ಆಧ್ಯಾತ್ಮಿಕ ಪ್ರಗತಿಗೆ ಪೂರಕವಾಗಿರಬೇಕು ಎಂಬುದನ್ನು ಶಬ್ದಾರ್ಥದ ಮೂಲಕವೇ ವಿವರಿಸಿ ಹೇಳಿರುವ ಶ್ರೀಮತಿ ಪ್ರಸನ್ನಾಕ್ಷಿಯವರು ಸಂಸ್ಕೃತದಲ್ಲಿ ವಿಶೇಷ ಪಾಂಡಿತ್ಯವುಳ್ಳವರು.**

**ಭಾರತೀಯರು,** ಭಾ = ಪ್ರಕಾಶ, ಜ್ಯೋತಿರೂಪಿ ಭಗವಂತನಲ್ಲಿ ರತರಾದವರು, ಅಂದರೆ ಆ ಜ್ಯೋತಿಯನ್ನು ಅಂತರಂಗದಲ್ಲಿ ಒಂದಲ್ಲ ಒಮ್ಮೆ ಕಾಣಲೇಬೇಕು, ಅದೇ ಜೀವನದ ಧ್ಯೇಯ, ಅದೇ ಬಾಳಾಟದ ಸಾರ್ಥಕ್ಯ ಎಂದು ತಿಳಿದು ಆ ಜ್ಯೋತಿದರ್ಶನಕ್ಕಾಗಿ ಹಂಬಲಿಸಿದವರು, "ಜೀವ"ದ ಸಕಲವಿಧ ಅಭಿವೃದ್ಧಿಗಾಗಿ ಚಿಂತಿಸಿದವರು.

ಅಭಿವೃದ್ಧಿ ಯಾರಿಗೆ ಬೇಡ? ಎಲ್ಲರೂ ಹೋರಾಡುವುದೇ ಅದಕ್ಕಲ್ಲವೆ? ಮಗು ಹುಟ್ಟಿದುದು, ಹುಟ್ಟಿದ ಹಾಗೆಯೇ ಇದ್ದರೆ ಗಾಬರಿ, ಆತಂಕ ಉಂಟಾಗುತ್ತದೆ. ತಕ್ಷಣ ವೈದ್ಯರ ಬಳಿ ಓಡಿಹೋಗುತ್ತಾರೆ. ಆಯಾ ವಯಸ್ಸಿನಲ್ಲಿ ಮಗು, ನೋಡುವುದು, ನಗುವುದು, ಮಗುಚಿಕೊಳ್ಳುವುದು, ಅಂಬೆಗಾಲಿಡುವುದು ಇತ್ಯಾದಿ ಮಾಡಬೇಕು, ಬೆಳೆಯುತ್ತಾ ಹೋಗಬೇಕು. ಈ ಯಾವುದರಲ್ಲಿ ಸ್ವಲ್ಪ ತಡವಾದರೂ ಮನಸ್ಸು ಕಳವಳಗೊಳ್ಳುವುದು. ತಜ್ಞವೈದ್ಯರ ಸಲಹೆಗೆ ತವಕಿಸುತ್ತಾರೆ. ಶರೀರದಿಂದ ಬೆಳೆದ ಮಗುವಿನಲ್ಲಿ ವಯಸ್ಸಿಗನುಗುಣವಾಗಿ ಬುದ್ಧಿಯೂ ಬೆಳೆಯಬೇಕು, ಅದಕ್ಕೆ ತಕ್ಕಂತೆ ಪ್ರತಿಕ್ರಯಿಸಬೇಕು. ನಾಲ್ಕು ವರ್ಷದ ಮಗು ಒಂದು ವರ್ಷದ ಮಗುವಿನ ಸಂವೇದನೆಯನ್ನೋ ಬುದ್ಧಿಯನ್ನೋ ಹೊಂದಿದ್ದರೆ ಅದು ಕಳವಳವನ್ನು ಉಂಟುಮಾಡುತ್ತದೆ. ಹೀಗೆ ಮಗುವಿನ ಶಾರೀರಿಕ, ಬೌದ್ಧಿಕ, ಮಾನಸಿಕ ಸ್ಥಿತಿಗಳ ಬೆಳವಣಿಗೆಗೆ ಸಕಲರೂ ಹಂಬಲಿಸುವುದು ಎಲ್ಲರಿಗೂ ತಿಳಿದ ವಿಷಯ. ಮಕ್ಕಳು ಸುಖಿಗಳಾಗಿ ಬದುಕಲಿ, ಯಾವುದೇ ವಿಧ ಶ್ರಮ ಬೇಡ, ಎಂದು ಬಯಸಿ ಅವರಿಗಾಗಿ ಬಂಗಲೆ (ಮನೆ) ಕಾರು ಇತ್ಯಾದಿಗಳನ್ನು ಒದಗಿಸಿಕೊಡುವವರೂ ಇದ್ದಾರೆ. ತಮಗಂತೂ ಇಲ್ಲ ಮಕ್ಕಳಾದರೂ ಈ ಎಲ್ಲಾ ಭೋಗಗಳನ್ನು ಪಡೆದು ಮಜಾ ಮಾಡಿಕೊಂಡು ಬದುಕಲಿ ಎಂದು ಹಾರೈಸುವವರೂ, ಹೊಟ್ಟೆಬಟ್ಟೆಗೆ ಕಟ್ಟಿ ಅವರಿಗಾಗಿ ಕೂಡಿಡುವವರೂ ಇದ್ದಾರೆ.

ಆದರೆ ಈ ಎಲ್ಲಕ್ಕೂ ಅತೀತವಾದ ಮತ್ತೊಂದು ಅಭಿವೃದ್ಧಿಯೂ ಉಂಟು, ಅದನ್ನು ಗಮನಿಸಬೇಕೆಂದು ಸನಾತನ ಆರ್ಯಋಷಿಗಳು ತೋರಿಸಿಕೊಟ್ಟಿದ್ದಾರೆ—ಯೋ ಬುದ್ಧೇಃ **ಪರತಸ್ತು ಸಃ** (ಯಾರು ಬುದ್ಧಿಗಿಂತಲೂ ಶ್ರೇಷ್ಠನೊ ಅವನು) ಎಂದು ಸಾರಿದ್ದಾರೆ. ತಾವು ಕಂಡುಂಡ ಬೆಳಕನ್ನು, ಆನಂದಾನುಭೂತಿಯನ್ನು, ಬ್ರಹ್ಮಾನಂದವನ್ನು ನಮಗೂ ಉಣಬಡಿಸಿರುವರು. ನಮ್ಮ ಆತ್ಮೋನ್ನತಿಗೆ ನಾವು ಪ್ರಯತ್ನಿಸಬೇಕು; ಗುರಿಮುಟ್ಟುವವರೆಗೆ, ಆ ಬೆಳಕನ್ನು ಕಂಡು ಆನಂದಿಸುವವರೆಗೆ, ಪರಬ್ರಹ್ಮತತ್ತ್ವದ ನೆಲೆ ಸೇರುವವರೆಗೆ ಸಾಗುತ್ತಾ ಅಭಿವೃದ್ಧ (ಮೂಲದೆಡೆಗೆ ಬೆಳೆಯುವುದು)ರಾಗಬೇಕು ಎಂದು ಆ ಮುನಿಗಳು ಬಯಸಿದರು.

ಶೃಣ್ವಂತು ಸರ್ವೇ ಅಮೃತಸ್ಯ ಪುತ್ರಾಃ, ಅಗ್ನಿಮಿಚ್ಛಧ್ವಂ ಭಾರತಾ, ಉತ್ತಿಷ್ಠತ, ಜಾಗ್ರತ —(ಎಲ್ಲ ಅಮೃತಪುತ್ರರಿರಾ ಕೇಳಿಸಿಕೊಳ್ಳಿ, ಭಾರತೀಯರಾದ ನೀವು ಅಗ್ನಿಯನ್ನು ಇಚ್ಛಿಸಬೇಕು, ಏಳಿ ಎಚ್ಚರಗೊಳ್ಳಿ) ಎಂದು ಕೂಗಿ ಕೂಗಿ ಸಾರಿದರು. ಈ ಒಂದು ಗುರಿಸಾಧನೆಯ ಏಮಕಿಗೆ ಕೆಲವೊಂದು ನೀತಿ ನಿಯಮಗಳನ್ನು ನಡಾವಳಿಗಳನ್ನು ತಂದುಕೊಟ್ಟರು. ಅವುಗಳಲ್ಲಿ "ಹಬ್ಬ"ವೂ ಒಂದು.

"ಹಬ್ಬ" ಎಂಬ ಶಬ್ದಕ್ಕೆ ಪರ್ವ, ಮಹ, ಉದ್ಧವ, ಉತ್ಸವ, ಕ್ಷಣ ಎಂಬ ಸಮಾನಾರ್ಥಕ ಪದಗಳಿವೆ. ಪರ್ವ ಎಂದರೆ ಗೆಣ್ಣು. ಇದು ಒಂದೊಂದು ತನ್ನಂತಹುದೇ ಇನ್ನೊಂದನ್ನು ಲೋಕಕ್ಕೆ ಕೊಡಬಲ್ಲುದ್ದಾಗಿ, ಸೃಷ್ಟಿಯ ನಿರಂತರತೆಯನ್ನು ಕಾಯಬಲ್ಲದ್ದು. ಒಂದೊಂದೂ (ಗೆಣ್ಣೂ) ಅಭಿವೃದ್ಧಿ ಹೊಂದುವ, ಸ್ವಸ್ವರೂಪ ಪ್ರಕಾಶಕವಾದ ಮತ್ತೊಂದನ್ನು ತಂದುಕೊಡಬಲ್ಲದಾದುದು. ಒಂದೊಂದು ಹಂತ ಮೇಲೇರಿದಂತೆ ಆನಂದದ ಆಧಿಕ್ಯ. ಈ ಹಬ್ಬಗಳೂ ಆಪರ್ವರಸೋದಯಃ ಎಂಬಂತೆ ಮೂಲಾಧಾರದಿಂದ ಸಹಸ್ರಾರದವರೆಗಿನ ಒಂದೊಂದು ಮೂಳೆಯ ಸಂಧಿಯಲ್ಲೂ (ಚಕ್ರಗಳಲ್ಲೂ) ವಿಭಿನ್ನ ಅನುಭವಗಳನ್ನುಂಟುಮಾಡುತ್ತಾ ಹೆಜ್ಜೆ ಹೆಜ್ಜೆಗೆ ಅಮೃತತ್ತ್ವವನ್ನು ನೀಡಬಲ್ಲವುಗಳು. "ಮಹ" ಎಂದರೆ ಮಹ್ಯತೇ = ಪೂಜ್ಯತೇ ; ತೇಜೋ ವಾ ಪ್ರಾಪ್ಯೋತಿ ಅನೇನ; ಯಾವುದರಿಂದ ಪೂಜನೀಯನಾಗಬಲ್ಲನೋ, ಅಂತರಂಗದ ತೇಜಃ ಪ್ರಕರ್ಷವನ್ನು ಹೊಂದುವನೋ ಅದು ಮಹ—ಪರಂಜ್ಯೋತಿರೂಪ ನಿರಂಜನ ಪರಮಾತ್ಮನನ್ನು ಹೊಂದುವಂತೆ ಮಾಡುವುದು.

"ಉದ್ಧವ"—ಉದ್ಧುನೋತಿ ದುಃಖಂ ಮೋಹಂ—ಮೋಹ, ದುಃಖಗಳನ್ನು ಹೊಡೆದೋಡಿಸುವಂತಹುದು. ನಮ್ಮನ್ನು ಈ ಲೋಕಕ್ಕೆ (ಭವಕ್ಕೆ) ಅಂಟಿಸುವುದು ಮೋಹವೇ. ನಾನು, ನನ್ನದು ಎನ್ನುವ ಮಮಕಾರ ಅಹಂಕಾರಗಳ ಪರಾಕಾಷ್ಠೆಯೇ ಸಕಲವಿಧ ದ್ವಂದ್ವಗಳಿಗೂ (ಲಾಭ-ನಷ್ಟ, ಜಯಾಪಜಯ, ಮಾನಾಪಮಾನ ಮುಂತಾದವು) ತನ್ಮೂಲಕ ಒದಗುವ ಸುಖ ದುಃಖಗಳಿಗೂ ಕಾರಣ. ಇವೆರಡೂ ನಿವೃತ್ತವಾದರೆ ಆಗ ಎಲ್ಲೆಲ್ಲೂ, ಯಾವಾಗಲೂ "ನೀನು", "ನಿನ್ನದು" ಎನ್ನುವುದೇ ಅನುಭವಗೋಚರವಾಗುತ್ತದೆ. ವಿಸ್ತಾರವಾಗಿ ಬೆಳೆದ ಈ ಪ್ರಪಂಚದ ಒಳಹೊರಗೆ ಎಲ್ಲೆಲ್ಲೂ ವ್ಯಾಪ್ತನಾದ ಅವನತನ ಗೋಚರವಾದಾಗಲೇ ಹಬ್ಬ (ಆನಂದ) ಅಲ್ಲವೇ? ಇನ್ನು ಕ್ಷೀಣೋತಿ ಶೋಕಂ ಎಂಬ ಅರ್ಥ ಹೊಂದಿರುವ "ಕ್ಷಣ" ಶಬ್ದವೂ ಈ ಹಿನ್ನೆಲೆಯಲ್ಲೇ ಅರ್ಥಪೂರ್ಣವಾಗುವುದು. ತರತಿ ಶೋಕಮಾತ್ಮವಿತ್ ಎಂಬ ಉಪನಿಷತ್ತಿನ ನುಡಿಯಂತೆ, ಆತ್ಮಜ್ಞಾನದಿಂದ ಶೋಕರಹಿತನನ್ನಾಗಿ ಮಾಡುವುದು ಈ ಹಬ್ಬ.

ಉತ್ಸವ = ಉತ್ಸವಯತಿ = ಪ್ರೇರಯತಿ, ಶ್ರೇಯಸೇ ಪ್ರೇಯಸೇ ವಾ, ಇಹಪರಗಳ ಅಭಿವೃದ್ಧಿಗೆ, ಪುರುಷಾರ್ಥ (ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ) ಸಿದ್ಧಿಗೆ ಪ್ರಚೋದಿಸುವಂತಹುದು. ಲೌಕಿಕ ಬೇಡವೆಂದಲ್ಲ. ಸಮುದ್ರದಾಟಲು ನೌಕೆ ಬೇಕು. ಅಂತೆಯೇ ಅರ್ಥ, ಕಾಮಾದಿಗಳು ಈ ಭವಸಾಗರ ದಾಟಲು ಸಹಾಯಕವಾದ ನೌಕೆಯಾಗಬೇಕು. ಹಾಗೆ ಬದುಕನ್ನು ಮಾಡಿಕೊಳ್ಳಬೇಕು, ಭೋಗಲೋಲುಪರಾಗಿ ಮೈಮರೆತು ಕೆಸರಿನಲ್ಲಿ ಸಿಕ್ಕ ಗಜರಾಜನಂತೆ ಕೆಳಕೆಳಗೆ ಇಳಿಯಬಾರದು ಎಂದು ಈ ಶಬ್ದ ತಿಳಿಸುತ್ತದೆ.

ಈ ಎಲ್ಲ ಅರ್ಥಗಳೂ "ಹಬ್ಬ" ಎಂಬ ಶಬ್ದಕ್ಕೆ ಚೆನ್ನಾಗಿ ಲಗತ್ತಾಗುತ್ತವೆ. ಆದುದರಿಂದ ಇಂತಹ ಹಬ್ಬಗಳ ಆಚರಣೆ ಹೇಗಿರಬೇಕು? ಆಟಾಟೋಪ, ಒಡವೆ, ವಸ್ತ್ರ, ವಸ್ತು, ಪದಾರ್ಥಗಳ ಪ್ರದರ್ಶನ, ಪೈಪೋಟಿಯ ವೈಭವ, ಆಡಂಬರ ಇವುಗಳಲ್ಲಿ ಪರ್ಯವಸಾನವಾದರೆ ಸರಿಯೇ? ಇಲ್ಲಿ ಊಟ, ಉಡುಗೆ, ತೊಡುಗೆ ಉಡುಗೊರೆಗಳಿಗೆ ಪ್ರಾಶಸ್ತ್ಯವೇ? ಎಂಬ ಪ್ರಶ್ನೆ ಮನದ ಮುಂದೆ ಸುಳಿದಾಗ ಮೇಲಿನ ಎಲ್ಲಾ ಅರ್ಥಗಳೂ "ಅಲ್ಲ" "ಅಲ್ಲ" ಎಂಬ ಉತ್ತರವನ್ನೇ ಕೊಡುತ್ತವೆ.

ಭಗವಂತನ ನಾಮಸ್ಮರಣೆ, ಜಪ, ಭಜನೆ, ಧ್ಯಾನಾದಿಗಳು ಇಂತಹ ದಿನಗಳಲ್ಲಿ ಪ್ರಧಾನವಾದುವು. ಈ ದಿನಗಳಲ್ಲಿ ಪ್ರಕೃತಿಯೇ ಅಂತರಂಗದ ಕಡೆಗೆ ಮನಸ್ಸನ್ನು ಅಭಿಮುಖಗೊಳಿಸಬಲ್ಲ ತರಂಗಾಂತರಗಳನ್ನು ಹೊಂದಿರುತ್ತದೆ. ಅದಕ್ಕೆ ಈ ನಮ್ಮ ವ್ಯಕ್ತಿತ್ವವನ್ನು ತೆರೆದಿಟ್ಟಾಗ ಸಿದ್ಧಿ ಕಷ್ಟಸಾಧ್ಯವಲ್ಲ. ಸತ್ಸಂಗ, ಸತ್ಕಥಾಕಾಲಕ್ಷೇಪ, ಮಹಾತ್ಮರ ಕುರಿತಾದ ಚಿಂತನ, ಅವರ ಹಿತೋಪದೇಶಗಳ ಮನನ ಇತ್ಯಾದಿಗಳು ಪ್ರಾಕೃತಿಕವಾದ ಶುದ್ಧ, ಚಿನ್ಮಯ ತರಂಗಾಂತರಗಳನ್ನು ಸ್ವೀಕರಿಸಲು ಬೇಕಾದ ಪೂರ್ವಭಾವೀ ಸಿದ್ಧತೆಗಳಾಗುತ್ತವೆ. ಈ ಹಿನ್ನೆಲೆಯಲ್ಲಿ ಹಬ್ಬವನ್ನು ಹೇಗೆ ಆಚರಿಸುವುದು ಸೂಕ್ತ ಎಂಬುದರ ಬಗ್ಗೆ ಸ್ವಲ್ಪ ಚಿಂತಿಸೋಣ. ❂




ಹಿಂದೂ ಹಬ್ಬಗಳು ಮತ್ತು ಉತ್ಸವಗಳು

ಸ್ವಾಮಿ ಹರ್ಷಾನಂದ

ಹಿಂದೂ ಹಬ್ಬಗಳ ತಾತ್ತ್ವಿಕ ಹಿನ್ನೆಲೆಯನ್ನೂ ಅವುಗಳ ಸಮರ್ಪಕ ಆಚರಣಾ ವಿಧಾನಗಳನ್ನೂ ತಿಳಿಸುತ್ತದೆ ಈ ಪುಸ್ತಕ.

ಪುಟ :88 +8 ಬೆಲೆ : ರೂ.25/-

ವ್ರತಗಳು ಉತ್ಸವಗಳು ಎಂಬ ಉಭಯ ಅಂಗಗಳನ್ನೊಳಗೊಂಡ ಹಿಂದೂ ಹಬ್ಬಗಳ ಮತ್ತು ಪವಿತ್ರ ದಿನಗಳ ಆಚರಣೆಯನ್ನು ವಿಧಿಸಿರುವುದು ಮಾನವ ಚೇತನ ಅನಿತ್ಯವಾದ ಲೌಕಿಕ ಸ್ತರದಿಂದ ನಿತ್ಯವಾದ ಪಾರಮಾರ್ಥಿಕ ಸ್ತರಕ್ಕೆ ಏರುವುದಕ್ಕಾಗಿಯೇ.

—ಪುಸ್ತಕದ 'ಪ್ರಸ್ತಾವನೆ' ಯಿಂದ